# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಸಿ.ಆರ್ /2006-07 ದಿನಾಂಕ:05-09-2006

## -:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಕೆಲವು ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಛೆಯುಳ್ಳವರು ತಮ್ಮ ಶೇಕಡವಾರು ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಲಕೋಟೆಯ ಮೇಲೆ ಕಾಮಗಾರಿ ಹೆಸರನ್ನು ನಮೂದಿಸಿದ ಜೊತೆಗೆ ನಿಗಧಿಪಡಿಸಿರುವ ಇ.ಎಂ.ಡಿ. ಹಣವನ್ನು ಡಿ.ಡಿ ಅಥವಾ ಕಛೇರಿಯಲ್ಲಿ ಪಾವತಿ ಮಾಡಿದ ನಗದು ರಶೀದಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು, ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರಿಗೆ ದಿನಾಂಕ:16-09-2006ರಂದು ಸಂಜೆ 4.00ಗಂಟೆ ಯೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಿದೆ. ಹಾಗೂ ಷರತ್ತುಗಳು ಕಛೇರಿಯ ನಾಮಫಲಕದಲ್ಲಿ, ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಬಹುದು.

1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ: 11-09-2006
2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 13-09-2006
3) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ:16-09-2006
4) ಭರ್ತಿ ಮಾಡಿದ ಟೆಂಡರ್ ಫಾರಂ ಶುಲ್ಕ ರೂ.250/-ಗಳು (ಮಾರಾಟ ಶುಲ್ಕ ಸೇರಿ)
5) ಪ್ರತಿ ಕಾಮಗಾರಿ ಮುಗಿಸಲು ನೀಡಿರುವ ಕಾಲಾವಧಿ : 2ತಿಂಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | ಸಿಟಿಜನ್ ಸರ್ವೀಸ್ ಕಟ್ಟಡದಲ್ಲಿ ಅಲ್ಯುಮಿನಿಯಂ ಪಾರ್ಟಿಶನ್ ಕಾಮಗಾರಿ ಮತ್ತು ಪೀಠೋಪಕರಣಗಳ ಖರೀದಿ ಕಾಮಗಾರಿಯಲ್ಲಿ ಅಲ್ಯುಮಿನಿಯಂ ಪಾರ್ಟಿಶನ್ ಕೆಲಸ ಮಾತ್ರ. (11ನೇ ಹಣಕಾಸು ಯೋಜನೆ) | 1,50,000 | 3,750 |
| 2 | ನಗರಸಭಾ ಕಛೇರಿಯ ಹಿಂಭಾಗದಲ್ಲಿರುವ ದೊಡ್ಡಚರಂಡಿಗೆ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕೆಲಸ. (ನಗರಸಭಾ ನಿಧಿ) | 20,000 | 500 |
| 3 | ರಂಗಮಂದಿರ ದುರಸ್ಥಿ ಕೆಲಸ. (ಎಸ್.ಎಫ್.ಸಿ ನಿಧಿ) | 5,50,000 | 11,000 |

**ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:**

1) ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿಗೆ ಟೆಂಡರ್‌ನೊಂದಿಗೆ ಸಲ್ಲಿಸಬೇಕು, ಇ.ಎಂ.ಡಿ. ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
2) ಟೆಂಡರ್ ಲಕೋಟೆಯ ಮೇಲೆ ಕಾಮಗಾರಿ ಹೆಸರು ಮತ್ತು ಕ್ರಮ ಸಂಖ್ಯೆಯನ್ನು ನಮೂದಿಸಿರ ಬೇಕು.
3) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.
4) ಕಛೇರಿಯ ಮೇಲಾಧಿಕಾರಿಗಳು ನೀಡುವ ಸುತ್ತೋಲೆಗಳಿಗೆ ಗುತ್ತಿಗೆದಾರರು ಬದ್ಧರಾಗಿರುತ್ತಕ್ಕದ್ದು.

| | | | |
|---|---|---|---|
| ಸಹಿ:- | ಸಹಿ:- | ಸಹಿ:- | ಸಹಿ:- |
| (ಶಾಂತಮ್ಮ) | (ವಿ.ರಾಜಪ್ಪ) | (ಸು.ನರಸಿಂಹಮೂರ್ತಿ) | (ಚಿಕ್ಕಣ್ಣ) |
| ಅಧ್ಯಕ್ಷರು, | ಉಪಾಧ್ಯಕ್ಷರು, | ಸ್ಥಾ.ಸ.ಅಧ್ಯಕ್ಷರು, | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. |

**" ನಕಲು ಪ್ರತಿ "**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**